# ಮಹಿಳಾ ವಿಮೋಚನೆ: ಡಾ. ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಕೋನಗಳು

**ಯಲ್ಲವ್ವ ವಾಲಿಕಾರ್*** & **ಸುಭಾಸಚಂದ್ರ ಸಿ. ನಾಟೀಕಾರ****

**DOI: https://doi.org/10.5281/zenodo.19638017**

**ABSTRACT**

ಭಾರತೀಯ ಸಮಾಜದಲ್ಲಿನ ಪುರೋಹಿತಶಾಹಿ ಮತ್ತು ಪಿತೃಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸಿದ ಡಾ. ಬಿ. ಆರ್. ಅಂಬೇಡ್ಕರ್ ಅವರು, ಮಹಿಳೆಯರ ಶಿಕ್ಷಣ, ಆರ್ಥಿಕ ಸ್ವಾವಲಂಬನೆ ಮತ್ತು ಸಮಾನತೆಗಾಗಿ ನಡೆಸಿದ ಹೋರಾಟಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಮನುಸ್ಮೃತಿಯ ದಹನ, ಮಹಾಡ್ ಸತ್ಯಾಗ್ರಹದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಮತ್ತು ಮಹಿಳಾ ಸಮ್ಮೇಳನಗಳ ಮೂಲಕ ಅವರು ಮೂಡಿಸಿದ ಜಾಗೃತಿಯನ್ನು ಗುರುತಿಸಲಾಗಿದೆ. ಕ್ರಾಂತಿಕಾರಕ 'ಹಿಂದೂ ಕೋಡ್ ಬಿಲ್' ಮಂಡಿಸುವ ಮೂಲಕ ಆಸ್ತಿ ಹಕ್ಕು, ವಿವಾಹ, ವಿಚ್ಛೇದನ ಮತ್ತು ದತ್ತು ಸ್ವೀಕಾರದಲ್ಲಿ ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸಲು ಅವರು ತೋರಿದ ಬದ್ಧತೆ, ಹಾಗೂ ಮಸೂದೆ ವಿಫಲವಾದಾಗ ಸಚಿವ ಸ್ಥಾನ ತ್ಯಜಿಸಿದ ದಿಟ್ಟತನವನ್ನು ವಿವರಿಸಲಾಗಿದೆ. ಇಂದಿನ ಅನೇಕ ಮಹಿಳಾಪರ ಶಾಸನಗಳಿಗೆ ಮತ್ತು ಸ್ತ್ರೀ ವಿಮೋಚನಾ ಚಳುವಳಿಗಳಿಗೆ ಅಂಬೇಡ್ಕರ್ ಅವರ ವೈಚಾರಿಕ ನಿಲುವುಗಳು ಹೇಗೆ ಭದ್ರ ಬುನಾದಿಯಾಗಿವೆ ಎಂಬುದನ್ನು ಸಮಗ್ರವಾಗಿ ಕಟ್ಟಿಕೊಡಲಾಗಿದೆ.

**KEYWORDS:** ಡಾ. ಬಿ. ಆರ್. ಅಂಬೇಡ್ಕರ್, ಮಹಿಳಾ ವಿಮೋಚನೆ, ಹಿಂದೂ ಕೋಡ್ ಬಿಲ್, ಲಿಂಗ ಸಮಾನತೆ, ಸ್ತ್ರೀ ಶಿಕ್ಷಣ ಮತ್ತು ಹಕ್ಕುಗಳು.

* **ಯಲ್ಲವ್ವ ವಾಲಿಕಾರ್,** ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** **ಡಾ. ಸುಭಾಸಚಂದ್ರ ಸಿ. ನಾಟೀಕಾರ,** ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪೀಠಿಕೆ:**

ಡಾ. ಬಿ.ಆರ್. ಅಂಬೇಡ್ಕರ್‌ರವರು 20ನೇ ಶತಮಾನದ ಮಹಾಚೇತನ, ಭಾರತದ ಸಾಮಾಜಿಕ ಚಿಂತಕರಾಗಿ, ವಿದ್ವಾಂಸರಾಗಿ, ಶೋಷಿತರ ಪರ ಹೋರಾಟಗಾರರಾಗಿ, ಸಾಮಾಜಿಕ ಸಮಾನತೆಗಾಗಿ ಅವರು ಮುನ್ನಡೆಸಿದ ಹೋರಾಟಗಳು ಚರಿತ್ರಾರ್ಹಗಳಾಗಿವೆ. ಪ್ರಮುಖವಾಗಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಅಂಶಗಳ ಮೂಲಕ ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಅಂಬೇಡ್ಕರ್‌ರವರು ಸಮಾಜ ಸುಧಾರಣೆಗಾಗಿ ಕೈಗೆತ್ತಿಕೊಂಡ ಹಲವಾರು ಕಾರ್ಯಕ್ರಮಗಳಲ್ಲಿ ಸ್ತ್ರೀಯರ ಸ್ಥಾನವನ್ನು ಭಾರತೀಯ ಸಂದರ್ಭದಲ್ಲಿ ಸುಧಾರಿಸಲು ಹಲವಾರು ಕ್ರಮಗಳನ್ನು ಕೈಗೊಂಡು; ಸಾಮಾಜಿಕ ಅನಿಷ್ಟಗಳಿಂದ ಸುತ್ತುವರೆದಿದ್ದ ಮಹಿಳೆಯರಿಗೆ ಸಮಾನತೆ, ಮುಕ್ತ ವಾತಾವರಣ ಕಲ್ಪಿಸುವಲ್ಲಿ ತಮ್ಮ ಚಿಂತನೆಗಳಿಂದ ಅಂಬೇಡ್ಕರ್‌ರವರು ದೇಶದ ಪ್ರಥಮ ವೈಜ್ಞಾನಿಕ ಮಹಿಳಾ ನಾಯಕರಾಗಿದ್ದಾರೆ. ಹಾಗೆಯೇ ಡಾ. ಬಿ.ಆರ್. ಅಂಬೇಡ್ಕರ್‌ರವರು ಸ್ತ್ರೀಯರ ಪ್ರಗತಿಯ ಕುರಿತು ಹೀಗೆ ಹೇಳಿದ್ದಾರೆ: "I measure the progress of a community by the degree of progress which women have achieved" ಅಂದರೆ ಅವರು ಮಹಿಳೆಯರ ಉತ್ತಮವಾದ ಸ್ಥಾನಮಾನದ ಕುರಿತು ಹೆಚ್ಚು ಒತ್ತು ನೀಡಿರುವುದನ್ನು ಕಾಣಬಹುದು.

ಅದೇ ರೀತಿಯಾಗಿ ಡಾ. ಬಿ.ಆರ್. ಅಂಬೇಡ್ಕರ್‌ರವರು ದಲಿತರ ಮತ್ತು ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮುಂತಾದ ಕ್ಷೇತ್ರಗಳ ಉದ್ಧಾರಕ್ಕಾಗಿ ಹಲವಾರು ಪತ್ರಿಕೆ ಮತ್ತು ಸಂಘಗಳನ್ನು ಪ್ರಾರಂಭಿಸಿದರು. ಪ್ರಮುಖವಾದವುಗಳೆಂದರೆ – ಮೂಕ ನಾಯಕ ಪತ್ರಿಕೆ [1920], ಬಹಿಷ್ಕೃತ ಭಾರತ ಪತ್ರಿಕೆ [1927], ಸಮಾಜ ಸಮತಾ ಸಂಘ [1929], ಜನತಾ ಪತ್ರಿಕೆ [1930], ಜನತಾ ಶಿಕ್ಷಣ ಸಂಸ್ಥೆ [1945].

ಪ್ರಸ್ತುತ ಅಧ್ಯಯನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಮಹಿಳಾ ವಿಮೋಚನೆಯಲ್ಲಿನ ವಿಚಾರಗಳನ್ನು ಕ್ರೋಢೀಕರಿಸಿ, ವಿವರಿಸಿ ತಿಳಿಸಲಾಗಿದೆ. ಪ್ರಾಥಮಿಕ ಮಾಹಿತಿ ಸಂಗ್ರಹಣೆಗಾಗಿ ರಚನೆಯಾದ ಸಾಹಿತ್ಯವನ್ನು ಪರಾಮರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ವಿವಿಧ ಲೇಖನಗಳಿಂದ, ನಿಯತಕಾಲಿಕೆಗಳಿಂದ, ಅನೇಕ ಕೃತಿಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಮಹಿಳಾ ವಿಮೋಚನೆ ಕುರಿತು ಡಾ. ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಕೋನಗಳು: ಡಾ. ಬಿ.ಆರ್. ಅಂಬೇಡ್ಕರ್‌ರವರು ಪ್ರಮುಖವಾಗಿ ಶಿಕ್ಷಣದ ಮೂಲಕ ವೈಚಾರಿಕ, ವೈಜ್ಞಾನಿಕ ತಿಳುವಳಿಕೆಯ ಹಿನ್ನೆಲೆಯಲ್ಲಿ ಪುರೋಹಿತಶಾಹಿ ಸಮಾಜ ಸೃಷ್ಟಿಸಿದ ಕತ್ತಲೆಯ ಬದುಕಿನ ಹಲವಾರು ಜನವಿರೋಧಿ ವಿಚಾರ ಮತ್ತು ಸಂಗತಿಗಳನ್ನು ಬಯಲಿಗೆಳೆದರು. ಅದರಲ್ಲಿ ಪ್ರಮುಖವಾಗಿ ಲಿಂಗ ಅಸಮಾನತೆ ಒಂದಾಗಿದೆ. ಹೀಗಾಗಿ "ಇಂದು ಮಹಿಳೆಯರಿಗೆ ಸ್ವಾತಂತ್ರ್ಯ ಬೇಕಾಗಿದೆ, ಅದು ಎಂತಹ ಸ್ವಾತಂತ್ರ್ಯವೆಂದರೆ ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಅವಳ ಆಯ್ಕೆಗೆ ಅನುಗುಣವಾಗಿ ಅವಕಾಶಗಳು ಲಭ್ಯವಾದರೆ ತನ್ನಿಂದ ತಾನೇ ಸಮಾನತೆ ಎಂಬುದು ಕಾಣಿಸಿಕೊಳ್ಳಬಲ್ಲುದು" ಎಂಬುದು ಡಾ. ಬಿ.ಆರ್. ಅಂಬೇಡ್ಕರ್‌ರವರ ಸ್ಪಷ್ಟ ನಿಲುವಾಗಿತ್ತು.

ಆದ್ದರಿಂದ ಡಾ. ಬಿ.ಆರ್. ಅಂಬೇಡ್ಕರ್‌ರವರು ಶಿಕ್ಷಣದ ಸಮಾನತೆ ಕುರಿತು ಈ ರೀತಿಯಾಗಿ ಹೇಳಿದ್ದಾರೆ: "ಶಿಕ್ಷಣವು ಪುರುಷರಿಗೆಷ್ಟು ಅಗತ್ಯವೋ; ಮಹಿಳೆಯರಿಗೆ ಅಷ್ಟೇ ಅಗತ್ಯ. ಮಹಿಳೆಯ ರಕ್ಷಣೆಗೆ ಶಿಕ್ಷಣವು ಒಂದು ಪ್ರಬಲ ಆಯುಧವಾಗಬಲ್ಲದು" ಎಂದು

ಸ್ತ್ರೀಯರಿಗೆ ಶಿಕ್ಷಣದ ಮಹತ್ವದ ಬಗ್ಗೆ ತಿಳಿಸಿದ್ದಾರೆ.

1927ರಲ್ಲಿ ಮಹಾಡ್ ಸತ್ಯಾಗ್ರಹ – ದೇವಾಲಯ ಪ್ರವೇಶ ಆಂದೋಲನದಲ್ಲಿ ಅನೇಕ ಮಹಿಳೆಯರು ಭಾಗವಹಿಸಿದ್ದರು. ಅದರಲ್ಲಿ ಪ್ರಮುಖವಾಗಿ 'ಶಾಂತಾಬಾಯಿ ಸಿಂಧೆ' ಭಾಗವಹಿಸಿದ್ದರು. ಈ ಸತ್ಯಾಗ್ರಹದಲ್ಲಿ ಮಹಿಳೆಯರ ಮತ್ತು ಶೂದ್ರರ ಕುರಿತಾಗಿರುವಂತಹ ಅಸ್ಪೃಶ್ಯತೆ ಮತ್ತು ಧಾರ್ಮಿಕ ಕಟ್ಟಳೆ ಪ್ರತಿಬಿಂಬಿಸುತ್ತಿದ್ದ ಮನುಸ್ಮೃತಿಯನ್ನು ಸುಟ್ಟು ಹಾಕಿದ್ದು, ಅತ್ಯಂತ ಗಮನಾರ್ಹ ಸಂಗತಿಯಾಗಿದೆ. ಈ ಸತ್ಯಾಗ್ರಹದ ನಂತರ ಡಾ. ಬಿ.ಆರ್. ಅಂಬೇಡ್ಕರ್‌ರವರು ಮಹಿಳೆಯರಿಗೆ ಈ ರೀತಿಯಾಗಿ ಸಲಹೆಗಳನ್ನು ನೀಡಿದರು: "ನಿಮ್ಮ ಉಡುಪು ಕ್ರಮವನ್ನು ಬದಲಾಯಿಸಿಕೊಳ್ಳಿ, ತೇಪೆಯಿದ್ದರೂ ಸಹ ಅದನ್ನು ಸ್ವಚ್ಛವಾಗಿ ಬಟ್ಟೆ ಧರಿಸಿ, ಸತ್ತ ಪ್ರಾಣಿಗಳ ಮಾಂಸ ಸೇವಿಸಬೇಡಿ" ಎಂದು ಹೇಳಿದರು.

ನಂತರ ಈ ಎಲ್ಲದರ ಪ್ರಭಾವದಿಂದಾಗಿ ಜುಲೈ 20, 1942 ರಂದು All India Dalit Mahila Conference ಮತ್ತು ಜನವರಿ 6, 1945 ರಲ್ಲಿ All India Untouchable Women's Conference ಗಳ ಸಂಘಟನೆಯಿಂದಾಗಿ ಮಹಿಳಾಪರ ಜಾಗೃತಿ ಮತ್ತು ಕ್ರಿಯಾಶೀಲತೆ ವಿಸ್ತೃತವಾಗಿದ್ದನ್ನು ಕಾಣಬಹುದು.

1946ರ ಭಾರತದ ಅಸೆಂಬ್ಲಿ ಚುನಾವಣೆಯಲ್ಲಿ ಚುನಾಯಿತರಾಗಿ ಮೊದಲ ಕಾನೂನು ಮಂತ್ರಿಯಾಗಿ ಆಯ್ಕೆಯಾದರು ನಂತರ ಏಪ್ರಿಲ್ 11, 1947 ರಂದು ಹಿಂದೂ ಕೋಡ್ ಬಿಲ್ ಅನ್ನು ರೂಪಿಸಿದರು. ಇದರಲ್ಲಿ ಪ್ರಮುಖವಾಗಿ ಸ್ವಾತಂತ್ರ್ಯೋತ್ತರದಲ್ಲಿರುವ ಹಿಂದೂ ಸಾಂಪ್ರದಾಯಿಕತೆಯನ್ನು ಬಲವಾಗಿ ಖಂಡಿಸಿದ್ದನ್ನು ಕಾಣಬಹುದು ಜೊತೆಗೆ ಈ ಹಿಂದೂ ಕೋಡ್ ಬಿಲ್‌ನಲ್ಲಿ ಮಹಿಳೆಯರ ಮೂಲಭೂತವಾದ ಹಕ್ಕುಗಳಿಗೆ ಹೆಚ್ಚಿನ ಆದ್ಯತೆಯನ್ನು ಮತ್ತು ಅಗತ್ಯತೆಯನ್ನು ಕೊಡಮಾಡಲ್ಪಟ್ಟಿದ್ದು ಗಮನಾರ್ಹವಾಗಿದೆ.

**ಹಿಂದೂ ಕೋಡ್ ಬಿಲ್‌ನ ಪ್ರಮುಖ ಅಂಶಗಳು:** ಡಾ. ಅಂಬೇಡ್ಕರ್‌ರವರು 'ಹಿಂದೂ ಕೋಡ್ ಬಿಲ್' ನಲ್ಲಿ ಮಹಿಳೆಯರ ಸಾಮಾಜಿಕವಾಗಿ ಬದಲಾವಣೆ ಅಂಶಗಳನ್ನು ಮತ್ತು ಅವರ ಹಕ್ಕುಗಳ ಕುರಿತು ಪ್ರತಿಪಾದಿಸಿದ್ದಾರೆ. 'ಹಿಂದೂ ಕೋಡ್ ಬಿಲ್' ಇದು ಕಾನೂನಿನ ಸರಣಿಯಾಗಿದೆ.

ಪ್ರಮುಖವಾಗಿ 1948 ರಲ್ಲಿ "Hindu Code Bill" ಅನ್ನು ಕುರಿತು ಸಂಸತ್ತಿನಲ್ಲಿ ಚರ್ಚಿಸಲಾಯಿತು. ಇದರ ನೇತೃತ್ವ ವಹಿಸಿದ ಅಂಬೇಡ್ಕರ್‌ರವರು ಉತ್ತಮವಾಗಿ ಮಂಡನೆ ಮಾಡಿ, ಅದರ ಉದ್ದೇಶಗಳನ್ನು ತಿಳಿಸಿದರು. ಮುಖ್ಯವಾಗಿ ಅವರು ಹಿಂದುಳಿದ ಭಾರತೀಯ ಸಮಾಜದ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಆಚರಣೆಗಳಾದ ಜಾತಿ ವ್ಯವಸ್ಥೆ ಮತ್ತು ಶೋಷಿತ ಮಹಿಳೆಯರ ಸ್ಥಿತಿಯನ್ನು ಬಲವಾಗಿ ವಿರೋಧಿಸಿ. ಸಾಮಾಜಿಕ ಬದಲಾವಣೆಗೆ ಸಮಾನತೆ ಪುರುಷರ ಜೊತೆಗೆ ಮಹಿಳೆಯರಿಗೆ ಸಮಾನವಾದ ಹಕ್ಕನ್ನು ನೀಡಬೇಕೆಂದು ಸೂಚಿಸಿದರು; ಆದರೆ ಪ್ರಮುಖವಾಗಿ ಪಿತೃಪ್ರಧಾನ ವ್ಯವಸ್ಥೆ, ಸಾಂಪ್ರದಾಯಿಕ ಕುಟುಂಬ ಪದ್ಧತಿ, 1951 ಮೊದಲ ಚುನಾವಣೆ ಕಾರಣ ನೆಹರುರವರ ವಿರೋಧ ಮುಂತಾದ ಕಾರಣಾಂತರಗಳಿಂದ ಹಿಂದೂ ಕೋಡ್ ಬಿಲ್ ಪಾಸಾಗಲಿಲ್ಲ. ಹೀಗಾಗಿ ಡಾ. ಅಂಬೇಡ್ಕರ್‌ರವರು ತಮ್ಮ ಕಾನೂನು ಮಂತ್ರಿ ಪದವಿಯನ್ನು ತಿರಸ್ಕರಿಸಿದ್ದು ಪ್ರಮುಖವಾಗಿದೆ.

ನಂತರ ಹೆಚ್ಚು ವಿರೋಧತೆಯ ನಡುವೆಯೂ ಅಂತಿಮವಾಗಿ 1955–56ರ ಸಂಸತ್ತಿನ ಅಧಿವೇಶನದಲ್ಲಿ ಹಿಂದೂ ಕೋಡ್ ಬಿಲ್ ಪಾಸಾಯಿತು. ಪ್ರಮುಖವಾಗಿ 2 ಉದ್ದೇಶಗಳಿಂದ ಕ್ರೋಢೀಕರಣವಾಗಿದ್ದು ಅವು ಇಂತಿವೆ:

1. ಹಿಂದೂ ಮಹಿಳೆಯರ ಸಾಮಾಜಿಕ ಅಂತಸ್ತನ್ನು ಮೇಲಕ್ಕೇರಿಸುವುದು.
2. ಜಾತಿ ವ್ಯವಸ್ಥೆಯ ಸಾಮಾಜಿಕ ಅಸಮಾನತೆ ಮತ್ತು ಅಸಮತೋಲನತೆಯನ್ನು ತೆಗೆದು ಹಾಕುವುದು.

**ಇನ್ನಿತರ ಅಂಶಗಳೆಂದರೆ:**

1. ಆಸ್ತಿಯಲ್ಲಿ ಪುರುಷರಂತೆ ಸ್ತ್ರೀಯರಿಗೆ, ವಿಧವೆಯರಿಗೂ ಸಹ ಆಸ್ತಿಯಲ್ಲಿ ಸಮಾನವಾದ ಭಾಗವನ್ನು ಹಂಚಿಕೆ ಮಾಡಬೇಕು.
2. ಮಹಿಳೆಯರಿಗೆ ಹಕ್ಕುಗಳಿಗೆ ಕುರಿತಾಗಿರುವಂತಹ ಕೆಲವು ಸಾಂಪ್ರದಾಯಿಕಗಳಿಗೆ ಸೀಮಿತಗೊಳಿಸದೆ ಬದಲಾಗಿ ಸಮಾನವಾದ ಹಕ್ಕನ್ನು ನೀಡಬೇಕು.
3. ಮಹಿಳೆಯರಿಗೆ ಕೆಲವು ಮಾನದಂಡಗಳಿಂದ ಸ್ವತಂತ್ರಗೊಳಿಸಬೇಕು ಅವುಗಳೆಂದರೆ, ವಿಚ್ಛೇದನಕ್ಕೆ ಅವಕಾಶ, ಕೌಟುಂಬಿಕ ದೌರ್ಜನ್ಯ ತಡೆ, ಧರ್ಮನಿಂದನೆ ತಡೆ ಅವಕಾಶ ಕಲ್ಪಿಸುವುದು ಮುಂತಾದವು.
4. ಏಕವಿವಾಹ ಪದ್ಧತಿಯನ್ನು ಕಡ್ಡಾಯಗೊಳಿಸುವುದು.
5. ಅಂತರ್ಜಾತಿ ವಿವಾಹಕ್ಕೆ ಮತ್ತು ಮಕ್ಕಳನ್ನು ದತ್ತು ಪಡೆಯಲು ಅವಕಾಶ ನೀಡುವುದು ಇತ್ಯಾದಿ.

**ಹಿಂದೂ ಕೋಡ್ ಬಿಲ್‌ನ ಲಾಭಾಂಶಗಳು:**

1. ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನವಾದ ಹಕ್ಕು ನೀಡಬೇಕೆಂಬುದು ತಿಳಿಸಿದೆ.
2. ಹಿಂದೂ ವೈಯಕ್ತಿಕ ಕಾನೂನಿನ ಪ್ರಕಾರ ಮದುವೆ ಪವಿತ್ರ ಬಂಧವಾಗಿದೆ ಮತ್ತು ವಿಚ್ಛೇದನಕ್ಕೆ ಅವಕಾಶವಿಲ್ಲ. ಆದರೆ ಈ ಕೋಡ್ ಮಹಿಳೆ ಮತ್ತು ಪುರುಷರಿಗೆ ವಿಚ್ಛೇದನಕ್ಕೆ ಸಮಾನ ಅವಕಾಶ ಮತ್ತು ಮದುವೆ ಆಯ್ಕೆಗೆ ಮುಕ್ತ ಅವಕಾಶ ನೀಡಿದೆ.
3. ವಿಧವೆಯರು ಮತ್ತು ವಿಚ್ಛೇದಿತ ಮಹಿಳೆಯರಿಗೆ ಪುನರ್ ಮದುವೆಯಾಗುವ ಹಕ್ಕು ನೀಡುವುದು.
4. ಅಂತರ್ಜಾತಿ ವಿವಾಹಕ್ಕೆ ಅವಕಾಶ ನೀಡಿದೆ ಇತ್ಯಾದಿ.

ಪ್ರಮುಖವಾಗಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಹಿಂದೂ ಕೋಡ್ ಬಿಲ್‌ನಲ್ಲಿ ಭಾರತೀಯ ಸಮಾಜದ ನ್ಯೂನ್ಯತೆ ಮತ್ತು ಸಾಂಪ್ರದಾಯಿಕ ವಿಚಾರವನ್ನು ವಿರೋಧಿಸಿ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಎಂಬ ಸಂವಿಧಾನದ ತತ್ವಗಳ ಆಧಾರದ ಮೇಲೆ ರೂಪಿತವಾಗಿದೆ. ಜೊತೆಗೆ ಭಾರತೀಯ ಸಮಾಜದಲ್ಲಿರುವ ಜಾತಿ ವ್ಯವಸ್ಥೆ ಮತ್ತು ಶೋಷಿತ ಮಹಿಳೆಯರ ಸ್ಥಿತಿಯನ್ನು ಕುರಿತು ವಿವರಿಸಿ ಸಾಮಾಜಿಕ ಬದಲಾವಣೆಗೆ ಸಮಾನತೆ ಮತ್ತು ಪುರುಷರ ಸರಿಸಮಾನವಾದ ಹಕ್ಕನ್ನು ಸ್ತ್ರೀಯರಿಗೂ ಕೊಡಬೇಕೆಂದು ಸೂಚಿಸಿದರು.

**ಉಪಸಂಹಾರ:**

ಹೀಗೆ, 20ನೇ ಶತಮಾನದಲ್ಲಿ ಅಂಬೇಡ್ಕರ್‌ರವರಿಗೆ ಸ್ತ್ರೀಯರ ಕುರಿತಾಗಿ ಹೊಂದಿದ ಹೊಸ ಆಲೋಚನೆಗಳಿಗೆ ಪರೋಕ್ಷವಾಗಿ ಬ್ರಿಟಿಷರ ಆಗಮನ ಸಹಾಯಕವಾಯಿತು. ಪ್ರಮುಖವಾಗಿ ಅವರ "ಆಂಗ್ಲ ಶಿಕ್ಷಣ ವ್ಯವಸ್ಥೆ" ಕಾರಣವಾಯಿತು. ಹೀಗಾಗಿ ಮಹಿಳೆಯರ ಬಗೆಗಿನ ಅವರ ಧೋರಣೆಗಳು ಹೆಚ್ಚು ನಿಖರವಾಗಿವೆ.

ಜೊತೆಗೆ ಸಾಮಾಜಿಕ ಅನಿಷ್ಟಗಳ ಪದ್ಧತಿಗಳಾದ ಲಿಂಗ ಅಸಮಾನತೆ, ಸತಿಪದ್ಧತಿ,

ದೇವದಾಸಿ ಪದ್ಧತಿ, ಬಾಲ್ಯವಿವಾಹ ಮುಂತಾದ ಸಾಮಾಜಿಕ ಆಚರಣೆಗಳ ಕುರಿತು ಡಾ. ಬಿ.ಆರ್. ಅಂಬೇಡ್ಕರ್‌ರವರು ಅನಕ್ಷರಸ್ಥ ಮಹಿಳೆಯರಿಗೆ ಜಾಗೃತಿ ಮೂಡಿಸಲು ಹಲವಾರು ಸಂಘ ಸಂಸ್ಥೆ, ಶಾಲೆ ಮತ್ತು ಪತ್ರಿಕೆ ಮುಂತಾದ ಕ್ರಮ ಕೈಗೊಂಡು ಸ್ತ್ರೀಯರ ಸಶಕ್ತೀಕರಣಕ್ಕಾಗಿ ಹೆಚ್ಚು ಒತ್ತನ್ನು ನೀಡಿದರು. ಇವರ ಫಲವಾಗಿಯೇ ಅನೇಕ ಮಹಿಳಾಪರ ಶಾಸನಾತ್ಮಕ ಕ್ರಮಗಳು ಜಾರಿಗೆ ಬಂದಿರುವುದನ್ನು ಕಾಣಬಹುದು.

**ಪ್ರಮುಖವಾದ ಕಾಯ್ದೆಗಳು:**

1. ಹಿಂದೂ ವಿಧವಾ ಪುನರ್ ವಿವಾಹ ಕಾಯ್ದೆ – 1856
2. ಭಾರತೀಯ ವಿವಾಹ ವಿಚ್ಛೇದ ಕಾಯ್ದೆ – 1872
3. ಬಾಲ್ಯ ವಿವಾಹ ನಿಷೇಧ ಕಾಯ್ದೆ – 1872
4. ಹಿಂದೂ ವಿವಾಹ ಕಾಯ್ದೆ – 1950
5. ವರದಕ್ಷಿಣೆ ನಿಷೇಧ ಕಾಯ್ದೆ – 1967
6. ಸಮಾನ ವೇತನ ಕಾನೂನು – 1976 ಇತ್ಯಾದಿ.

ಹೀಗೆ, ಮಹಿಳೆಯರಿಗೆ ಹಕ್ಕುಗಳು ಮತ್ತು ಅವಕಾಶಗಳಲ್ಲಿ ಸಮಾನತೆಯನ್ನು ಒದಗಿಸಲು ಜಾಗೃತಿ ಮೂಡಿಸಲು ಮತ್ತು ಸುಧಾರಣೆಯನ್ನು ತರುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ. ಅದರಲ್ಲಿ ಅಸ್ಪೃಶ್ಯತೆಗೆ ಧಾರ್ಮಿಕ ಕಟ್ಟಳೆ ತೊಡಿಸಿದ ಮನುಸ್ಮೃತಿಯನ್ನು ಸುಟ್ಟು ಹಾಕಿದ ಸಂಗತಿ ಗಮನಾರ್ಹವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ವಿಮೋಚನೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಕೋನಗಳು ಮತ್ತು ಮಹಿಳೆಯರಿಗೆ ನೀಡಿರುವ ಸಾಂವಿಧಾನಿಕ ಪ್ರಾವಧಾನಗಳನ್ನು ಮಹಿಳಾ ಸಶಕ್ತೀಕರಣದಲ್ಲಿ ಯಾವ ರೀತಿಯಾಗಿ ಪ್ರಭಾವ ಬೀರಿವೆ ಎಂಬುದನ್ನು ಹಾಗೂ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗಾಗಿ ಅವರು ಹೊಂದಿರುವ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

**ಪರಾಮರ್ಶನ ಗ್ರಂಥಗಳು:**


1. Ankit Tiwari, (2014), Dalit And Constitutional Protection.
2. Suraj Nanan Prasad (2010), Ambedkar And Indian Code Of Laws, A.B.D Publishers.
3. ವಿಶು ಕುಮಾರ ಎನ್. ಆರ್ (2015), "ಜನಪದ ಮಾಸ ಪತ್ರಿಕೆ" ವಾರ್ತಾ ಇಲಾಖೆ, ಬೆಂಗಳೂರು.
4. ಲಕ್ಷ್ಮಣ ಎಸ್.ವಿ. (2012), "ಸ್ಪರ್ಧಾಸ್ಫೂರ್ತಿ", ಮಾಸ ಪತ್ರಿಕೆ.